KACN320015532025

Presented on : 11-04-2025
Registered on : 11-04-2025
Decided on : 09-06-2026

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೊಳ್ಳೇಗಾಲ.**

**ದಿನಾಂಕಃ 09 ನೇ ಜೂನ್ 2026**

**ಉಪಸ್ಥಿತರು**

ಶ್ರೀಮತಿ ಕಾವ್ಯಶ್ರೀ ಎಂ.
ಬಿ.ಎ., ಎಲ್.ಎಲ್.ಬಿ.
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೊಳ್ಳೇಗಾಲ.

**ಸಿ.ಸಿ.ನಂ.756/2025**

**ಪಿರ್ಯಾದಿಃ** ರಾಜ್ಯದ ಪರವಾಗಿ, ಆರಕ್ಷಕ ಉಪ ನಿರೀಕ್ಷಕರು,
ಕೊಳ್ಳೇಗಾಲ ಗ್ರಾಮಾಂತರ ಪೋಲಿಸ್ ಠಾಣೆ.

– **ವಿರುದ್ಧ** –

**ಆರೋಪಿಗಳುಃ** 1. ಸಂತೋಷ್ ಬಿ. ಬಿನ್ ಬಸವಯ್ಯ, 33 ವರ್ಷ,
**ವಿಳಾಸಃ** ಆಲಹಳ್ಳಿ ಗ್ರಾಮ, ಕೊಳ್ಳೇಗಾಲ ತಾಲ್ಲೂಕು.

**2.** ತಿಮ್ಮ @ತಿಮ್ಮರಾಜು ಬಿನ್ ಲೇಟ್ ಸೊಮಣ್ಣ, **42** ವರ್ಷ,
**ವಿಳಾಸಃ** ಸಿದ್ದರಾಮನಹುಂಡಿ ಗ್ರಾಮ, ವರುಣ ಹೋಬಳಿ,
ಮೈಸೂರು ತಾಲ್ಲೂಕು ಮತ್ತು ಜಿಲ್ಲೆ.

3.ಶಂಕರ ಬಿನ್ ಲೇಟ್ ಶಿವಮಾದಯ್ಯ, 32 ವರ್ಷ,
**ವಿಳಾಸಃ** ಹೊಸನರೀಪುರ ಗ್ರಾಮ, ಸೋಸಲೆ ಹೋಬಳಿ,
ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.

4. ಶೇಖರ್ @ಲಿಂಗರಾಜು ಎಲ್.
ಬಿನ್ ಲಿಂಗಯ್ಯ @ನಿಂಗಯ್ಯ , 43 ವರ್ಷ,

**ವಿಳಾಸಃ** ತಿಮ್ಮಾರಾಜೀಪುರ ಗ್ರಾಮ, ಕೊಳ್ಳೇಗಾಲ ತಾಲ್ಲೂಕು.

| | | |
|---|---|---|
| 1 | ಅಪರಾಧ ಘಟಿಸಿದ ದಿನಾಂಕ | 21.07.2024 |
| 2 | ಅಪರಾಧ ವರದಿಯಾದ ದಿನಾಂಕ | 21.07.2024 |
| 3 | ಆರೋಪಿ ದಸ್ತಗಿರಿಯಾದ ದಿನಾಂಕ | 22.07.2024 |
| 4 | ಆರೋಪಿಸಲಾದ ಕಲಂಗಳು | ಭಾ.ನ್ಯಾ.ಸ.ಕಲಂ.352,115(2), 118(1), 351(2) ಸಹವಾಚಕ ಕಲಂ 3(5) |
| 5 | ಪಿರ್ಯಾದಿದಾರರ ಹೆಸರು | ಶ್ರೀ.ಎನ್. ರಘು |
| 6 | ವಿಚಾರಣೆ ಪ್ರಾರಂಭವಾದ ದಿನಾಂಕ | 12.03.2026 |
| 7 | ವಿಚಾರಣೆ ಮುಕ್ತಾಯವಾದ ದಿನಾಂಕ | 04.06.2026 |
| 8 | ಪಿರ್ಯಾದಿಯ ಪರವಾಗಿ | ಸಹಾಯಕ ಸರ್ಕಾರಿ ಅಭಿಯೋಜಕರು, |
| 9 | ಆರೋಪಿತರ ಪರ ವಕೀಲರು | ಶ್ರೀ.ಟಿ.ಎಂ., ವಕೀಲರು, |
| 10 | ಪೀಠಾಸೀನಾಧಿಕಾರಿಗಳ ಅಭಿಪ್ರಾಯ | ಆರೋಪಿತರನ್ನು ನಿರ್ದೋಷಿಗಳು ಎಂದು ಪರಿಗಣಿಸಿದೆ. |

-: **ತೀರ್ಪು** :-

ಈ ಪ್ರಕರಣವನ್ನು ಕೊಳ್ಳೇಗಾಲ ಗ್ರಾಮಾಂತರ ಪೋಲಿಸ್ ಠಾಣೆಯ ಠಾಣಾಧಿಕಾರಿಯು ಆರೋಪಿತರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ 352,115(2), 118(1), 351(2) ಸಹವಾಚಕ ಕಲಂ 3(5) ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳ ಬಾಬ್ತು ದಾಖಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಾರಾಂಶವೇನೆಂದರೆ**:

ಕೊಳ್ಳೇಗಾಲ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು ತಿಮ್ಮರಾಜೀಪುರ ಗ್ರಾಮದ ಸಾಕ್ಷಿ-2 ರವರ ಅಜ್ಜಿ ಮೃಪಟ್ಟಿದ್ದ ಹಿನ್ನಲೆಯಲ್ಲಿ ಸಾಕ್ಷಿ-2 ರವರ ಮನೆಯ ಮುಂದೆ ದಿನಾಂಕಃ 20.12.2024 ರಂದು ಸಾಕ್ಷಿ-1 ರಿಂದ 5 ರವರು ಮತ್ತು ಆರೋಪಿತರು ಸೇರಿದ್ದು ರಾತ್ರಿ 11.00 ಗಂಟೆ ಸಮಯದಲ್ಲಿ ಸಾಕ್ಷಿ-1 ರವರು ಸಾಕ್ಷಿ-2 ರವರ ಭುಜದ ಮೇಲೆ ಕೈಇಟ್ಟು ತಮಾಷೆ ಮಾಡುತ್ತಿದ್ದಾಗ 1ನೇ ಆರೋಪಿ ರವರು ಈ ಸಮಯದಲ್ಲಿಯೂ ತಮಾಷೆ ಮಾಡುತ್ತಿದಿಐೀಯಾ ಬೋಳಿಮಗನೇ ನಿನ್ನ ವಯಸ್ಸೇನು ಮಹೇಶನ ವಯಸ್ಸೇನು ಎಂದು ಕೆಟ್ಟ ಪದಗಳಿಂದ ಬೈಯುತ್ತಿದ್ದಾಗ 2 ಮತ್ತು 3ನೇ ಆರೋಪಿಗಳು ಏಕಾಏಕಿ ತಮ್ಮ ಕೈಗಳಿಂದ ಸಾಕ್ಷಿ-1 ರವರ ಮೈಕೈಗೆ ಹಾಗೂ ಕಿಬ್ಬೊಟ್ಟೆಗೆ ಹೊಡೆದು ನೋವುಂಟು ಮಾಡಿರುತ್ತಾನೆ. 1ನೇ ಆರೋಪಿ ದೊಣ್ಣೆಯಿಂದ ಸಾಕ್ಷಿ-1 ರವರ ಎಡಗಣ್ಣಿನ ಹತ್ತಿರ ಹೊಡೆದು ರಕ್ತಗಾಯಪಡಿಸಿರುತ್ತಾನೆ. 4ನೇ ಆರೋಪಿ ನೀನು ತಮ್ಮ ಮೇಲೆ ಕಂಪ್ಲೆಂಟ್ ಕೊಟ್ಟು ಏನು ಮಾಡೋಕಾಗುತ್ತೆ ತಮ್ಮ ಮೇಲೆ ಕಂಪ್ಲೇಂಟ್ ಕೊಟ್ಟರೆ ನಿನ್ನು ಮುಗಿಸುವುದಾಗಿ ಸಾಕ್ಷಿ-1 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂಬುದಾಗಿ ಚಾಸಾ-1 ರವರು ನೀಡಿದ ದೂರಿನ ಅನ್ವಯ ಪ್ರಥಮ ವರ್ತಮಾನ ವರದಿಯ ಆಧಾರದ ಮೇಲೆ ಅಪರಾಧ ಸಂಖ್ಯೆಃ 250/2024 ರಂತೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಕೊಳ್ಳೇಗಾಲ ಗ್ರಾಮಾಂತರ ಪೋಲಿಸ್ ಠಾಣೆಯ ಪೋಲಿಸರು ಆರೋಪಿತರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ 352,115(2), 118(1), 351(2) ಸಹವಾಚಕ ಕಲಂ

3(5)ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳ ಅಡಿಯಲ್ಲಿ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

3. ತನಿಖಾಧಿಕಾರಿಯು ತನಿಖೆಯನ್ನು ಪೂರೈಸಿ ಆರೋಪಿಯ ವಿರುದ್ದ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಸದರಿ ದೋಷರೋಪಣಾ ಪಟ್ಟಿ ಹಾಗೂ ದಾಖಲಾತಿಗಳ ಅನುಸಾರ ಈ ನ್ಯಾಯಾಲಯವು ಆರೋಪಿತರ ವಿರುದ್ದ ಭಾರತೀಯ ನ್ಯಾಯ ಸಂಹಿತೆ ಕಲಂ 352,115(2), 118(1), 351(2) ಸಹವಾಚಕ ಕಲಂ 3(5) ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಗೆ ಸಂಜ್ಞೇಯತೆಯನ್ನು ತೆಗೆದುಕೊಂಡಿರುತ್ತದೆ. ಆ ನಂತರ ನ್ಯಾಯಾಲಯವು ಆರೋಪಿತರಿಗೆ ಸಮನ್ಸ್ ಜಾರಿ ಮಾಡಿದ್ದು, ಆರೋಪಿತರು ಸಮನ್ಸ್ ಪಡೆದು ನ್ಯಾಯಾಲಯದ ಸಮಕ್ಷಮ ಹಾಜರಾಗಿ ಆರೋಪಿತರು ಪ್ರಕರಣದ ದಾಖಲೆಗಳ ನಕಲುಗಳನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 207ರ ಪ್ರಕಾರ ಒದಗಿಸಲಾಗಿದೆ. ಮುಂದುವರೆದು, ಮೇಲ್ಕಂಡ ಆರೋಪಿತರ ವಿರುದ್ದ ದೋಷರೋಪಣೆಯನ್ನು ರಚಿಸಿ, ಓದಿ ಹೇಳಲಾಗಿ, ದೋಷಾರೋಪಣೆಯನ್ನು ಅಲ್ಲಗಳೆದಿರುವ ಕಾರಣ ಅದನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯು 10 ಜನ ಸಾಕ್ಷಿದಾರರ ಪೈಕಿ 2 ಸಾಕ್ಷಿಧಾರರನ್ನು ತಮ್ಮ ಪರವಾಗಿ ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ ಮತ್ತು 7 ದಾಖಲೆಗಳನ್ನು ಹಾಜರುಪಡಿಸಿ ಅವುಗಳನ್ನು ನಿಪಿ-1 ರಿಂದ ನಿಪಿ-7 ಎಂಬುದಾಗಿ ನಿಶಾನಿಸಿಕೊಂಡಿರುತ್ತಾರೆ.

4. ಅಭಿಯೋಜನೆಯ ಪರ ಸಾಕ್ಷಿದಾರರ ಸಾಕ್ಷ್ಯದಲ್ಲಿ ಆರೋಪಿತರ ವಿರುದ್ಧ ಯಾವುದೇ ಅಪರಾಧಿಕ ಹೇಳಿಕೆಗಳು ಕಂಡು ಬಾರದ ಕಾರಣ ಆರೋಪಿತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 313(1)(ಬಿ) ಅಡಿಯಲ್ಲಿ ಪ್ರಶ್ನಿಸಿ, ಹೇಳಿಕೆಯನ್ನು ದಾಖಲಿಸುವ ಹಂತವನ್ನು ವರ್ಜಿಸಲಾಗಿದೆ.

5. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಹಾಗೂ ಆರೋಪಿತರ ಪರ ನ್ಯಾಯವಾದಿಗಳ ವಾದ ವಿವಾದಗಳನ್ನು ಆಲಿಸಲಾಯಿತು ಹಾಗೂ ಲಭ್ಯ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಯಿತು.

6. ಈ ಕೆಳಗಿನ ಅಂಶಗಳು ನ್ಯಾಯಾಲಯದ ಪರ್ಯಾಲೋಚನೆಗೆ ಉದ್ಭವಿಸುತ್ತವೆಃ

1.ದಿನಾಂಕಃ 20.12.2024 ರಂದು ರಾತ್ರಿ ಸುಮಾರು 11-00 ಗಂಟೆಯ ಸಮಯದಲ್ಲಿ ಕೊಳ್ಳೇಗಾಲ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ತಿಮ್ಮರಾಜೀಪುರ ಗ್ರಾಮದ ಸಾಕ್ಷಿ-2 ರವರ ಅಜ್ಜಿಯು ಮೃತಪಟ್ಟಿದ್ದ ಹಿನ್ನೆಲೆಯಲ್ಲಿ ಸಾಕ್ಷಿ-2 ರವರ ಮನೆಯ ಮುಂದೆ ಸಾಕ್ಷಿ-1 ರಿಂದ 5 ರವರು ಮತ್ತು ಆರೋಪಿತರು ಸೇರಿದ್ದು, ಆ ಸಮಯದಲ್ಲಿ ಸಾಕ್ಷಿ-1 ರವರು ಸಾಕ್ಷಿ-2 ರವರ ಭುಜದ ಮೇಲೆ ಕೈ ಇಟ್ಟು ತಮಾಷೆ ಮಾಡುತ್ತಿದ್ದಾಗ ಆರೋಪಿ-1 ರವರು ಈ ಸಮಯದಲ್ಲಿ ತಮಾಷೆ ಮಾಡುತ್ತಿದ್ದಿಯಾ ಬೋಳಿಮಗನೇ ನಿನ್ನ ವಯಸ್ಸೇನು ಮಹೇಶನ ವಯಸ್ಸೇನು ಎಂದು ಕೆಟ್ಟ ಪದಗಳಿಂದ ಬೈದಿದ್ದು, ಆ ಮೂಲಕ ಆರೋಪಿತರಾದ ನೀವು ಭಾರತೀಯ ನ್ಯಾಯಾ ಸಂಹಿತೆ ಕಲಂ 352 ಸಹವಾಚಕ ಕಲಂ 3(5)ರ ಪ್ರಕಾರ ಅಪರಾಧ ಎಸಗಿದ್ದಾರೆ ಎನ್ನುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತುಪಡಿಸುತ್ತದೆಯೇ?

2. 2ನೇಯದಾಗಿ, ಮೇಲೆ ಹೇಳಿದ ಅದೇ ದಿನಾಂಕ, ಅದೇ ಸ್ಥಳದಲ್ಲಿ, ಆರೋಪಿ-2 ಮತ್ತು 3 ರವರು ಕೈಗಳಿಂದ ಸಾಕ್ಷಿ-1 ರವರ ಮೈಕೈಗೆ ಹಾಗೂ ಕಿಬ್ಬೊಟ್ಟೆಗೆ ಹೊಡೆದು ನೋವುಂಟು ಮಾಡಿರುತ್ತೀರಿ, ಆ ಮೂಲಕ ಆರೋಪಿಗಳಾದ ನೀವುಗಳು ಭಾರತೀಯ ನ್ಯಾಯ ಸಂಹಿತೆ ಕಲಂ ಕಲಂ 115(2) ಸಹವಾಚಕ ಕಲಂ 3(5) ರ ಪ್ರಕಾರ ಅಪರಾಧ ಎಸಗಿದ್ದಾರೆ ಎನ್ನುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತುಪಡಿಸುತ್ತದೆಯೇ?

3. 3ನೇಯದಾಗಿ, ಮೇಲೆ ಹೇಳಿದ ಅದೇ ದಿನಾಂಕ, ಅದೇ ಸ್ಥಳದಲ್ಲಿ, ಆರೋಪಿಗಳಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಬಂದು ನಿಮ್ಮ ಪೈಕಿ ಆರೋಪಿ-1 ರವರು ದೊಣ್ಣೆಯಿಂದ ಸಾಕ್ಷಿ-1 ರವರ ಎಡಗಣ್ಣಿನ ಹತ್ತಿರ ಹೊಡೆದು ರಕ್ತಗಾಯ ಪಡಿಸಿದ್ದು, ಆ ಮೂಲಕ ಆರೋಪಿತರಾದ ನೀವುಗಳು ಭಾರತೀಯ ನ್ಯಾಯಾ ಸಂಹಿತೆ ಕಲಂ 118(1) ಸಹವಾಚಕ ಕಲಂ 3(5) ರ ಪ್ರಕಾರ ಅಪರಾಧ ಎಸಗಿದ್ದಾರೆ ಎನ್ನುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತುಪಡಿಸುತ್ತದೆಯೇ?

**4. ಕೊನೇಯದಾಗಿ, ಮೇಲೆ ಹೇಳಿದ ಅದೇ ದಿನಾಂಕ, ಅದೇ ಸ್ಥಳದಲ್ಲಿ, ಆರೋಪಿಗಳಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಬಂದು ನಿಮ್ಮ ಪೈಕಿ ಆರೋಪಿ-4 ರವರು ನೀನು ನಮ್ಮ ಮೇಲೆ ಕಂಪ್ಲೆಂಟ್ ಕೊಟ್ಟು ಏನು ಮಾಡೊಕಾಗುತ್ತೆ ನಮ್ಮ ಮೇಲೆ ಕಂಪ್ಲೆಂಟ್ ಕೊಟ್ಟರೆ ನಿನ್ನನ್ನು ಮುಗಿಸುವುದಾಗಿ ಸಾಕ್ಷಿ-1 ರವರಿಗೆ ಕೊಲೆ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿಯಾದ ನೀನು ಭಾರತೀಯ ನ್ಯಾಯಾ ಸಂಹಿತೆ ಕಲಂ 351(1) ಸಹವಾಚಕ ಕಲಂ 3(5) ರ ಪ್ರಕಾರ ಅಪರಾಧ ಎಸಗಿದ್ದಾರೆ ಎನ್ನುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ಸಾಬೀತುಪಡಿಸುತ್ತದೆಯೇ?**

5. **ಏನು ಆದೇಶ ?**

7. ಈ ಮೇಲಿನ ಅಂಶಗಳಿಗೆ ಈ ಕೆಳಗೆ ವಿವರಿಸಿರುವ ಕಾರಣಗಳಿಗಾಗಿ ನ್ಯಾಯಾಲಯದ ಉತ್ತರಗಳು ಈ ಕೆಳಗಿನಂತಿವೆಃ

-: **ಅಂಶಗಳು** :-

ಅಂಶ :- 1 ರಿಂದ 4 ನಕಾರಾತ್ಮಕವಾಗಿ,

ಅಂಶ :- 5 ಅಂತಿಮ ಆದೇಶದಂತೆ. ಈ ಮುಂದಿನ

-: **ಕಾ ರ ಣ ಗ ಳು** :-

8. **ಅಂಶ-1 ರಿಂದ 4**:- ಈ ಎಲ್ಲಾ ಅಂಶಗಳು ಒಂದಕ್ಕೊಂದು ಸಂಬಂಧಪಟ್ಟಿರುವುದರಿಂದ ಅನುಕೂಲತೆಯ ದೃಷ್ಟಿಯಿಂದ ಮತ್ತು ಸಾಕ್ಷ್ಯದ ವಿಶ್ಲೇಷಣೆಯ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಇವುಗಳನ್ನು ಜೊತೆಜೊತೆಯಾಗಿ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಅಭಿಯೋಜನೆಯು ತನ್ನ ನಿಲುವನ್ನು ರುಜವಾತುಪಡಿಸಲು ಒಟ್ಟು 2 ಸಾಕ್ಷಿದಾರರನ್ನು ಸಾಕ್ಷ್ಯಪಟ್ಟಿಯಲ್ಲಿ ಹೆಸರಿಸಿಕೊಂಡಿರುತ್ತದೆ. ಅಭಿಯೋಜನೆಯು ಸದರಿ ಸಾಕ್ಷಿಗಳಲ್ಲಿ ಚಾಸಾ-1 ರವರನ್ನು ಫ್ರಾಸಾ-2, ಚಾಸಾ-2 ರವರನ್ನು ಫ್ರಾಸಾ-1 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ.

9. ಈ ಪ್ರಕರಣದಲ್ಲಿ ಚಾಸಾ–1/ಫ್ರಾಸಾ–2 ರವರು ಪಿರ್ಯಾದಿ ಹಾಗೂ ಗಾಯಾಳು ಸಾಕ್ಷಿದಾರರಾಗಿದ್ದು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ 2 ತನ್ನ ಸಹೋದರ, ಆರೋಪಿಗಳು ತಮ್ಮ ಕುಟುಂಬದವರು, ತನ್ನ ಮತ್ತು ಆರೋಪಿಗಳ ನಡುವೆ ಈಗ್ಗೆ 2 ವರ್ಷದ ಹಿಂದೆ ತನ್ನ ಅಜ್ಜಿ ಮೃತ ಪಟ್ಟ ಸಮಯದಲ್ಲಿ ತಮಾಷೆ ಮಾತಿಗೆ ಸಂಬಂಧಿಸಿದಂತೆ ಬಾಯಿ ಮಾತಿನ ಜಗಳವಾಗಿತ್ತು. ಆ ಸಮಯದಲ್ಲಿ ತಾನು ದುಃಖ ಮತ್ತು ಕೋಪದ ಭರದಲ್ಲಿ ಮೌಖಿಕ ದೂರು ನೀಡಿದ್ದೆ. ಆ ಸಮಯದಲ್ಲಿ ಪೊಲೀಸರು ಎರಡು ದಾಖಲಾತಿಗಳಿಗೆ ತನ್ನಿಂದ ಸಹಿ ಪಡೆದಿರುತ್ತಾರೆ. ಸದರಿ ದಾಖಲೆಗಳಲ್ಲಿನ ಸಂಗತಿಗಳು ತನಗೆ ಗೊತ್ತಿಲ್ಲ. ಪೊಲೀಸರು ಓದಿ ಹೇಳಿರುವುದಿಲ್ಲ ಹಾಗೂ ನ್ಯಾಯಾಲಯದ ಸಮಕ್ಷಮ ಇರುವ ಒಂದು ದೊಣ್ಣೆ, ಒಂದು ಶರ್ಟ್ ಮತ್ತು ಬನಿಯನ್ ಅನ್ನು ನೋಡಿ ತಾನು ಈ ಮೊದಲು ನೋಡಿಲ್ಲ ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆಂದು, ದೂರು ದಾಖಲು ಮಾಡಿದ ನಂತರ ಪೊಲೀಸರು ಗ್ರಾಮಕ್ಕೆ ಬಂದಿದ್ದು, ಆ ಸಮಯದಲ್ಲಿ ಪೊಟೋ ತೆಗೆದುಕೊಂಡಿದ್ದರು ಯಾವ ಕಾರಣಕ್ಕೆ ಎಂದು ತನಗೆ ಗೊತ್ತಿಲ್ಲ, ಪೊಲೀಸರು ಸಹ ತಿಳಿಸಿರುವುದಿಲ್ಲ ಹಾಗೂ ಆರೋಪಿಯು ತನ್ನ ಸಂಬಂಧಿಕರಾದ ಕಾರಣ ತಮ್ಮ ನಡುವಿನ ಜಗಳವನ್ನು ಅದೇ ದಿನ ರಾಜೀ ಮಾಡಿಕೊಂಡಿರುವುದಾಗಿ ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

10. ಈ ಪ್ರಕರಣದಲ್ಲಿ ಚಾಸಾ–2/ಫ್ರಾಸಾ–1 ರವರು ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ–1 ತನ್ನ ದೊಡ್ಡಪ್ಪನ ಮಗ, ಆರೋಪಿಗಳು ತನ್ನ ಸಂಬಂಧಿಗಳು, ಈ ಪ್ರಕರಣದ ಬಗ್ಗೆ ತನಗೆ ಯಾವುದೇ ಮಾಹಿತಿ ಇಲ್ಲ, ಪೊಲೀಸರ ಸಮಕ್ಷಮ ತಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ ಹಾಗೂ ನ್ಯಾಯಾಲಯದ ಸಮಕ್ಷಮ ಇರುವ ಒಂದು ದೊಣ್ಣೆ, ಶರ್ಟ್ ಮತ್ತು ಬನಿಯನ್ ಅನ್ನು ನೋಡಿ ತಾನು ಈ ಮೊದಲು ನೋಡಿಲ್ಲ ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

11. ಫ್ರಾಸಾ–1 ಮತ್ತು ಫ್ರಾಸಾ–2 ರವರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಅವರನ್ನು ಸುದೀರ್ಘ ಪಾಟೀ ಸವಾಲಿಗೆ ಒಳಪಡಿಸಿದ್ದಾಗಿಯೂ ಸಹ

ಅಭಿಯೋಜನೆಯ ನಿಲುವನ್ನು ಪುಷ್ಠೀಕರಿಸುವಂತಹ ಯಾವುದೇ ಮಹತ್ವದ ಅಂಶಗಳನ್ನು ಹೊರತರಿಸಿರುವುದಿಲ್ಲ. ಚಾಸಾ-1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಮ್ಮ ನಡುವಿನ ಪ್ರಕರಣವನ್ನು ರಾಜೀ ಮಾಡಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಆದರೆ, ಕ್ರಿಮಿನಲ್ ಪ್ರಕರಣಗಳಲ್ಲಿ ರಾಜೀ ಮಾಡಿಕೊಂಡ ಕಾರಣದಿಂದಲೇ ಪ್ರಕರಣವನ್ನು ಮುಕ್ತಾಯ ಮಾಡಲು ಬರುವುದಿಲ್ಲ. ಈ ಪ್ರಕರಣದಲ್ಲಿ ಫ್ರಾಸಾ-1ರವರು ದೂರುದಾರರು, ಗಾಯಾಳು ಹಾಗೂ ಫ್ರಾಸಾ-2 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿ.ಪಿ.1 ದೂರಿಗೆ ವಿರುದ್ದವಾಗಿ ತಮ್ಮ ಸಾಕ್ಷ್ಯ ನುಡಿದಿರುತ್ತಾರೆ. ಈ ಪ್ರಕರಣದಲ್ಲಿ ಚಾಸಾ-1 ರವರು ವಸ್ತುನಿಷ್ಟ ಸಾಕ್ಷಿಯಾಗಿದ್ದು, ಸದರಿಯವರು ತಮ್ಮ ದೂರನ್ನು ಪುಷ್ಟೀಕರಿಸುವಂತೆ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಹಾಗಾಗಿ ಉಳಿದ ಸಾಕ್ಷಿದಾರರನ್ನು ನ್ಯಾಯಾಲಯದ ಸಮಕ್ಷಮ ಹಾಜರಾಗಲು ಸಮನ್ಸ್ ಜಾರಿ ಮಾಡಿರುವುದಿಲ್ಲ. ಮುಂದುವರೆದು, ಈ ಪ್ರಕರಣದ ದೂರುದಾರರು, ಗಾಯಾಳು ಸಾಕ್ಷ್ಯವನ್ನು ಪರಿಶೀಲಿಸಲಾಗಿ, ದೋಷಾರೋಪಣಾ ಪಟ್ಟಿಯಲ್ಲಿ ತಿಳಿಸಿರುವ ಸಂಗತಿಯನ್ನು ಪುಷ್ಟೀಕರಿಸುವಂತೆ ಯಾವುದೇ ಸಾಕ್ಷ್ಯ ಕಂಡು ಬಂದಿರುವುದಿಲ್ಲ.

12. ಒಟ್ಟಾರೆಯಾಗಿ, ನ್ಯಾಯಾಲಯದ ಸಮಕ್ಷಮ ಲಭ್ಯವಿರುವ ಸಾಕ್ಷ್ಯಾಧಾರಗಳಿಂದ ಫ್ರಾಸಾ-1 ಮತ್ತು ಫ್ರಾಸಾ-2 ರವರು ಹಾಗೂ ಆರೋಪಿಯು ಈ ಪ್ರಕರಣವನ್ನು ರಾಜೀ ಮಾಡಿಕೊಂಡಿರುವುದು ಕಂಡು ಬರುತ್ತಿದೆ. ಫ್ರಾಸಾ-1 ಮತ್ತು ಫ್ರಾಸಾ-2 ರವರ ಸಾಕ್ಷ್ಯದಂತೆ ಆರೋಪಿತರ ವಿರುದ್ಧ ಆರೋಪಿಸಲಾದ ಕೃತ್ಯವನ್ನು ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸ್ಸಂಶಯವಾಗಿ ರುಜುವಾತು ಪಡಿಸಲು ವಿಫಲರಾಗಿರುತ್ತಾರೆ. ಸದರಿ ಸಂಶಯದ ಲಾಭವನ್ನು ಆರೋಪಿತರಿಗೆ ನೀಡುತ್ತಾ, ಅಂಶಃ1 ರಿಂದ 4 ನ್ನು **ನಕಾರಾತ್ಮಕವಾಗಿ** ಉತ್ತರಿಸಿರುತ್ತೇನೆ.

13. **ಅಂಶ-5-** ಈ ಮೇಲೆ ವಿವರಿಸಿರುವ ಕಾರಣಗಳು ಮತ್ತು ನ್ಯಾಯಾಲಯವು ಹೊಂದಿದ ಅಭಿಪ್ರಾಯಗಳಿಗಾಗಿ ಈ ಕೆಳಗಿನಂತೆ ಆದೇಶಿಸುತ್ತಿದ್ದೇನೆ.

## ಆದೇಶ

ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ 271 ರ ಅಡಿಯಲ್ಲಿ ವರ್ತಿಸುತ್ತಾ ಆರೋಪಿತರನ್ನು ಭಾರತೀಯ ನ್ಯಾಯ ಸಂಹಿತೆ ಕಲಂ. 352,115(2), 118(1), 351(2) ಸಹವಾಚಕ ಕಲಂ 3(5) ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳ ಬಾಬ್ತಿನ ಆರೋಪಗಳಿಗಾಗಿ ನಿರ್ದೋಷಿಗಳು ಎಂದು ಪರಿಗಣಿಸಿ ಬಿಡುಗಡೆಗೊಳಿಸಲಾಗಿದೆ.

ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ 480 ರ ಅಡಿಯಲ್ಲಿ ಜಾರಿ ಮಾಡಿಕೊಟ್ಟಿದ್ದ, ಜಾಮೀನು ಮತ್ತು ಬಾಂಡ್ ಆರು ತಿಂಗಳವರೆಗೆ ಜಾರಿಯಲ್ಲಿರುತ್ತದೆ.

ಪಿ.ಎಫ್. ಸಂಖ್ಯೆ 302/2024 ರಲ್ಲಿ ಕಂಡುಬರುವ ಒಂದು ದೊಣ್ಣೆ ಶರ್ಟ್ ಮತ್ತು ಬನಿಯನ್ ಬೆಲೆ ಬಾಳದ ವಸ್ತುಗಳಾದ ಕಾರಣ ಅಪೀಲು ಅವಧಿ ಮುಗಿದ ನಂತರ ನಾಶಪಡಿಸುವಂತೆ ಆದೇಶಿಸಲಾಗಿದೆ.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಅವರು ಗಣಕೀಕೃತಗೊಳಿಸಿದ ತರ್ಜುಮೆಯನ್ನು ತಿದ್ದಿ ಸಹಿ ಮಾಡಿ ದಿನಾಂಕಃ 09.06.2026 ರಂದು ತೆರೆದ ನ್ಯಾಯಾಲಯದಲ್ಲಿ ನಾನು ಉದ್ಘೋಷಿಸಿರುತ್ತೇನೆ.)

**( ಎಂ. ಕಾವ್ಯಶ್ರೀ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.,ಕೊಳ್ಳೇಗಾಲ.

-: **ಅನುಬಂಧ** :-

**ಅಭಿಯೋಜನೆಯ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿಃ**

ಪ್ರಾಸಾ-1: ಮಲ್ಲೇಶ

ಪ್ರಾಸಾ-2: ರಘು

**<u>ಆರೋಪಿ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ:</u>**

– ಇಲ್ಲ –

**<u>ಅಭಿಯೋಜನೆಯ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿ:</u>**

| | | | |
|---|---|---|---|
| ನಿಪಿ–1 | : | ಫ್ರಾಸಾ–2 ರವರ ಹೇಳಿಕೆ | |
| ನಿಪಿ–2 | : | ದೂರು, | (ಎ) : ಸಹಿ. |
| ನಿಪಿ–3 | : | ಸ್ಥಳ ಮಹಜರ್ | (ಎ) : ಸಹಿ |
| ನಿಪಿ–4 ರಿಂದ 6 | : | ಪೊಟೋಗಳು | |
| ನಿಪಿ–7 | : | ಪಿರ್ಯಾದಿಯ ಮರು ಹೇಳಿಕೆ | |

**<u>ಆರೋಪಿ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿ:</u>**

– ಇಲ್ಲ –

**<u>ಅಭಿಯೋಜನೆಯ ಪರವಾಗಿ ಗುರುತಿಸಲಾದ ಮುದ್ದೆ ಮಾಲುಗಳು:</u>**

– ಇಲ್ಲ –

**(ಎಂ. ಕಾವ್ಯಶ್ರೀ )**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾದಂ.,ಕೊಳ್ಳೇಗಾಲ.

Visit **ecourts.gov.in** for updates or download mobile app "**eCourts Services**" from Android or iOS

**(ತೀರ್ಪನ್ನು ಪ್ರತ್ಯೇಕವಾಗಿ ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು)**

**ಆದೇಶ**

ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ 271 ರ ಅಡಿಯಲ್ಲಿ ವರ್ತಿಸುತ್ತಾ ಆರೋಪಿತರನ್ನು ಭಾರತೀಯ ನ್ಯಾಯ ಸಂಹಿತೆ ಕಲಂ. 352,115(2), 118(1), 351(2) ಸಹವಾಚಕ ಕಲಂ 3(5) ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳ ಬಾಬ್ತಿನ ಆರೋಪಗಳಿಗಾಗಿ ನಿರ್ದೋಷಿ ಎಂದು ಪರಿಗಣಿಸಿ ಬಿಡುಗಡೆಗೊಳಿಸಲಾಗಿದೆ.

ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ 480 ರ ಅಡಿಯಲ್ಲಿ ಜಾರಿ ಮಾಡಿಕೊಟ್ಟಿದ್ದ, ಜಾಮೀನು ಮತ್ತು ಬಾಂಡ್ ಆರು ತಿಂಗಳವರೆಗೆ ಜಾರಿಯಲ್ಲಿರುತ್ತದೆ.

ಪಿ.ಎಫ್. ಸಂಖ್ಯೆ 302/2024 ರಲ್ಲಿ ಕಂಡುಬರುವ ಒಂದು ದೊಣ್ಣೆ, ಶರ್ಟ್ ಮತ್ತು ಬನಿಯನ್ ಬೆಲೆ ಬಾಳದ ವಸ್ತುಗಳಾದ ಕಾರಣ ಅಪೀಲು ಅವಧಿ ಮುಗಿದ ನಂತರ ನಾಶಪಡಿಸುವಂತೆ ಆದೇಶಿಸಲಾಗಿದೆ.

**(ಎಂ. ಕಾವ್ಯಶ್ರೀ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.,ಕೊಳ್ಳೇಗಾಲ.